ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

संस्कृतशिक्षणनिर्देशनालयः
कर्नाटकसंस्कृतविश्वविद्यालयः
पम्पमहाकविमार्गः, चामराजपेटे, बेङ्गलूरु–५६००१८

ಸಂಖ್ಯೆ:–ಕಸಂವಿ:ಸಂಶಿನಿ: ಪ್ರ.ಕಾ.ಸಾ.ವೇ.ಪ.ಅ/2021–22 ದಿನಾಂಕ:–14.03.2022

# ಆದೇಶ

**ವಿಷಯ:– 2021–22 ನೇ ಸಾಲಿನ ವೇದ ವಾಚಾ ಪರೀಕ್ಷೆಗಳನ್ನು ನಡೆಸುವ ಬಗೆಗೆ ,**

ಸದರಿ ವಿಷಯಕ್ಕೆ ಸಂಬಂಧಿಸಿದಂತೆ 2021–22 ನೇ ಸಾಲಿನ ವೇದ ವಾಚಾ ಪರೀಕ್ಷೆಗಳನ್ನು ಸಂಸ್ಕೃತ ಪರೀಕ್ಷೆಗಳು ಪ್ರಾರಂಭವಾದ ಒಂದು ವಾರದೊಳಗಾಗಿ ಸಂಬಂಧಿಸಿದ ವೇದ ಪಾಠಶಾಲೆಗಳ ಮುಖ್ಯ ಶಿಕ್ಷಕರೇ ವಾಚಾ ಪರೀಕ್ಷೆಗಳನ್ನು ನಡೆಸಿ, ನೋಂದಣಿ ಸಂಖ್ಯೆ, ವೇದ ಪರೀಕ್ಷೆಯ ಹೆಸರು ವಿದ್ಯಾರ್ಥಿಗಳು ತೆಗೆದುಕೊಂಡ ವೇದ ವಿಭಾಗದ ಹೆಸರು ಹಾಗೂ ವಾಚಾ ಪರೀಕ್ಷೆಯಲ್ಲಿ ಪಡೆದ ಅಂಕವನ್ನು ಸ್ಪಷ್ಟವಾಗಿ ನಮೂದಿಸಿ ವಾಚಾ ಪರೀಕ್ಷೆ ನಡೆಸಿದ ಶಿಕ್ಷಕರ ಹೆಸರು ಮತ್ತು ಸಹಿಯೊಂದಿಗೆ ಅಂಕಪಟ್ಟಿಗಳನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾಂಗಕ್ಕೆ ಸಲ್ಲಿಸಲು ಸೂಚಿಸಿದೆ. ವಾಚಾ ಪರೀಕ್ಷೆಗೆ ಸಂಬಂಧಿಸಿದ ಗೌರವಧನವನ್ನು ಪರೀಕ್ಷೆ ಮುಗಿದ ನಂತರದಲ್ಲಿ ಸಾದಿಲ್ವಾರು ಬಿಲ್ಲಿನಲ್ಲಿ ಸೇರಿಸಿ ಸಲ್ಲಿಸಬೇಕು. ಬಿಲ್ಲನ್ನು ಪರಿಶೀಲಿಸಿ ನಂತರದಲ್ಲಿ ಹಣವನ್ನು ಮುಖ್ಯಧೀಕ್ಷಕರ ಖಾತೆಗೆ ಸಲ್ಲಿಸಲಾಗುವುದು.ಸದರಿ ಮೊತ್ತವನ್ನು ಈ ಕೆಳಕಂಡ ರೀತಿಯಲ್ಲಿ ನೀಡುವುದು.

1) ವೇದ ವಾಚಾ ಪರೀಕ್ಷೆಗಳ ಗೌರವಧನವನ್ನು ಕನಿಷ್ಠ 200 ರೂಗಳಂತೆ ನಿಗದಿ ಗೊಳಿಸಲಾಗಿದೆ.(ಪ್ರತ್ಯೇಕ ವೇದ)

2) 10 ವಿದ್ಯಾರ್ಥಿಗಳಿಗಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ಒಬ್ಬ ವಿದ್ಯಾರ್ಥಿಗೆ 10 ರೂಗಳಂತೆ ನಿಗಧಿಗೊಳಿಸಲಾಗಿದೆ.

sd/-
ನಿರ್ದೇಶಕರು

ಪ್ರತಿಗಳು:

1. ಮುಖ್ಯೋಪಾಧ್ಯಾಯರು: ವೇದಪಾಠಶಾಲೆಗಳು
2. ಕಛೇರಿ ಪ್ರತಿ

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

संस्कृतशिक्षणनिर्देशनालयः
कर्नाटकसंस्कृतविश्वविद्यालयः
पम्पमहाकविमार्गः, चामराजपेटे, बेङ्गलूरु–५६००१८

ಸಂಖ್ಯೆ:–ಕಸಂವಿ:ಸಂಶಿನಿ: ಪ್ರ.ಕಾ.ಸಾ.ವೇ.ಪ.ಅ/2021–22 ದಿನಾಂಕ:–14.03.2022

## ಆದೇಶ

ವಿಷಯ;–2021–22 ನೇ ಸಾಲಿನ ಸಂಸ್ಕೃತ ಪ್ರಥಮಾ, ಕಾವ್ಯ,ಸಾಹಿತ್ಯ ಪರೀಕ್ಷೆಗಳನ್ನು ನಡೆಸುವ ಬಗೆಗೆ ಹಾಗೂ ಸಾದಿಲ್ವಾರು ಮೊತ್ತವನ್ನು ವಿತರಿಸುವ ಬಗೆಗೆ ,

ಸದರಿ ವಿಷಯಕ್ಕೆ ಸಂಬಂಧಿಸಿದಂತೆ 2021–22 ನೇ ಸಾಲಿನ ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ ಪರೀಕ್ಷೆಗಳು ಒಟ್ಟು 224 ಕೇಂದ್ರಗಳಲ್ಲಿ ನಡೆಯಲಿದ್ದು ಆಯಾಯ ಕೇಂದ್ರದ ಮುಖ್ಯ ಶಿಕ್ಷಕರನ್ನೇ ಪರೀಕ್ಷಾ ಮುಖ್ಯ ಅಧೀಕ್ಷಕರನ್ನಾಗಿ ಈ ಮೂಲಕ ಆದೇಶಿಸಲಾಗಿದೆ. ಹಾಗೂ ಪರೀಕ್ಷಾ ಕೇಂದ್ರಗಳಲ್ಲಿ ಆಗುವ ಖರ್ಚು ವೆಚ್ಚಗಳಿಗಾಗಿ ಪಾಠಶಾಲೆಗಳಿಗೆ ನೀಡಬೇಕಾದ ಸಾದಿಲ್ವಾರು ಮೊತ್ತವನ್ನು ಪರೀಕ್ಷೆ ಮುಗಿದು ಬಿಲ್ಲುಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿದ ನಂತರದಲ್ಲಿ ಬಿಲ್ಲುಗಳನ್ನು ಪರಿಶೀಲಿಸಿ ಖರ್ಚಾದ ಹಣವನ್ನು ನೀಡಲಾಗುವುದು. ಹಾಗೂ ಪ್ರಶ್ನೆಪತ್ರಿಕೆಗಳನ್ನು ಸ್ವೀಕರಿಸಲು ಬರುವ ಶಿಕ್ಷಕರಿಗೆ ನೀಡುವ 100/ ರೂಗಳನ್ನು ಕೂಡ ಸಾದಿಲ್ವಾರು ಬಿಲ್ಲಿನಲ್ಲಿಯೇ ಬರೆದು ಕಳುಹಿಸಬೇಕು. ಇದಕ್ಕೆ ಸಂಬಂಧಿಸಿದ ಪ್ರಯಾಣದ ಟಿಕೇಟ್ ಲಗತ್ತಿಸಿರಬೇಕು. ಮುಖ್ಯ ಅಧೀಕ್ಷಕರು ಪರೀಕ್ಷಾ ವೆಚ್ಚವನ್ನು ಕೆಳಗೆ ನೀಡಿರುವ ಸಾದಿಲ್ವಾರು ಮಾಹಿತಿಗೆ ತಕ್ಕಂತೆ ಭರಿಸಲು ಸೂಚಿಸಲಾಗಿದೆ. ಹಾಗೂ ಸಂಬಂಧಿಸಿದ ಖರ್ಚಿನ ಬಿಲ್ಲುಗಳನ್ನು ಸಿದ್ಧಪಡಿಸಿ ಒಂದು ಪ್ರತಿಯನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ವಿಭಾಗಕ್ಕೆ ಪರೀಕ್ಷೆ ಮುಗಿದ 25.03.2022 ರ ಒಳಗಾಗಿ ಕಛೇರಿಗೆ ತಲುಪುವಂತೆ ಹಾಗೂ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ.ನಂತರ ಬಂದ ಬಿಲ್ಲುಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಮುಖ್ಯ ಅಧೀಕ್ಷಕರೇ ಜವಾಬ್ದಾರರಾಗಿರುತ್ತಾರೆ.

1. ಮುಖ್ಯ ಅಧೀಕ್ಷಕರಿಗೆ ದಿನ ಒಂದಕ್ಕೆ 100 ರೂಗಳು
2. ಕೊಠಡಿ ಮೇಲ್ವಿಚಾರಕರಿಗೆ ಒಂದು ಅವಧಿಗೆ 50 ರೂಗಳು.
3. ಕಛೇರಿ ಸಹಾಯಕರಿಗೆ ದಿನ ಒಂದಕ್ಕೆ 50 ರೂಗಳು
4. ಡಿ ಗ್ರೂಪ್ ನೌಕರನಿಗೆ ಒಂದು ದಿನಕ್ಕೆ 40 ರೂಗಳು
5. ಒಂದು ಕೊಠಡಿಯಲ್ಲಿ 30 ವಿದ್ಯಾರ್ಥಿಗಳನ್ನು ಕೂರಿಸುವುದು
6. ಖರೀದಿಸಿದ ಸಾಮಗ್ರಿಗಳ ಸ್ಟೇಷನರಿ ಬಿಲ್ಲು (ಒರಿಜನಲ್) ಕಡ್ಡಾಯವಾಗಿ ಲಗತ್ತಿಸಬೇಕು
7. ಪರೀಕ್ಷೆಯ ದಿನಾಂಕಗಳಾದ 19.03.2022 ರಿಂದ 21.3.2022 ರವರೆಗೆ (ಮೂರು ದಿನಗಳು) ಮಾತ್ರ ಸಾದಿಲ್ವಾರು ಅನ್ವಯ
8. ಉತ್ತರ ಪತ್ರಿಕೆಗಳನ್ನು ರವಾನಿಸಿದ ಕೊರಿಯರ್ ಅಥವಾ ಪೋಸ್ಟ್ ಮಾಡಿದ ಒರಿಜನಲ್ ರಸೀದಿ ಇರಬೇಕು.
9. **SBI ಅಕೌಂಟ್ ನಂಬರ್ ಹಾಗೂ ಪಾಸಬುಕ್ ಮುಖಪುಟದ ನಕಲು ಪ್ರತಿ ಕಡ್ಡಾಯವಾಗಿ ಲಗತ್ತಿಸುವುದು.**

ನಿರ್ದೇಶಕರು

ಪ್ರತಿಗಳು:

1.ಕಛೇರಿ ಪ್ರತಿ

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

संस्कृतशिक्षणनिर्देशनालयः
कर्नाटकसंस्कृतविश्वविद्यालयः
पम्पमहाकविमार्गः, चामराजपेटे, बेङ्गलूरु–५६००१८

**ಸಂಖ್ಯೆ:–ಕಸಂವಿ:ಸಂಶಿನಿ: ಪ್ರ.ಕಾ.ಸಾ.ವೇ.ಪ.ಅ/2021–22** **ದಿನಾಂಕ:–14.03.2022**

**ಮುಖ್ಯ ಅಧೀಕ್ಷಕರು,**
ಸಂಸ್ಕೃತ ಪರೀಕ್ಷೆಗಳು,

**ವಿಷಯ: ಸಂಸ್ಕೃತ ಸಾಹಿತ್ಯ ಹಾಗೂ ವೇದ ಮೂಲ ಉತ್ತರ ಪತ್ರಿಕೆಗಳನ್ನು ರವಾನಿಸುವ ಬಗೆಗೆ**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಕೃತ ಸಾಹಿತ್ಯ ಹಾಗೂ ವೇದ ಪರೀಕ್ಷೆಗಳು ದಿನಾಂಕ;–19.03.2022 ರಿಂದ 21.03.2022 ರವರೆಗೆ ನಡೆಯಲಿದ್ದು, ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮತ್ತು ಸಂಬಂಧಿಸಿದ ಲಗತ್ತುಗಳನ್ನು ಈ ಲಕೋಟೆಯಲ್ಲಿಟ್ಟು ನೀಡಲಾಗಿದೆ. ಈ ಸಂಬಂಧ ಪರೀಕ್ಷೆಗಳು ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ದಿನಾಂಕ **22.03.2022** ರಂದು ತಪ್ಪದೇ **ಈ ಕೆಳಕಂಡ ವಿಳಾಸಕ್ಕೆ** ಕಳುಹಿಸಲು ಸೂಚಿಸಿದೆ.

**ಇವರಿಗೆ,**
**ಪರೀಕ್ಷಾ ನಿಯಂತ್ರಕರು,**
**ಪರೀಕ್ಷಾ ವಿಭಾಗ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,**
**ಬೆಂಗಳೂರು–18.**

ಈ ಪತ್ರದೊಂದಿಗೆ ಕಳುಹಿಸಿಕೊಡುವ ಲಗತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

1. **ನಾಮಾಂಕಿತ ಪಟ್ಟಿ (ಎನ್ ಆರ್)**
2. **ಮುಖ್ಯಾಧೀಕ್ಷಕರ ನೇಮಕದ ಆದೇಶ ಪ್ರತಿ, ಸಾದಿಲ್ವಾರು**
3. **ಉತ್ತರ ಪತ್ರಿಕೆಗಳನ್ನು ರವಾನಿಸಲು ಕಛೇರಿ ಆದೇಶ**
4. **ಸಿ,ಜಿ.ಬಿಲ್ಲುಗಳು, ಗೌಪ್ಯ ಲಕೋಟೆ ಹಾಗೂ ನಿದರ್ಶನ ನಮೂನೆಗಳು ಪ್ರಶ್ನೆ ಪತ್ರಿಕೆಗಳ ಜೊತೆಯಲ್ಲಿರುತ್ತವೆ**

**sd/-**
**ನಿರ್ದೇಶಕರು**

**ಪ್ರತಿಗಳು:**

1.ಕಛೇರಿ ಪ್ರತಿ